
ಪದಬಂಧ



ಎಡದಿಂದ ಬಲಕ್ಕೆ:
1. ಸಾವಿರ ಹಂಸಗಳ ಕಗ್ಗೊಲೆಯಾಯಿತೇ? (3)
3. ಅಡಿಕೆ ತೋಟದ ಹಾದಿ ಕಂಡಿರಾ? ಬರೀ ಓರೆ ಕೋರೆ (4)
4. ಕೊರತೆ ಇದ್ದರೂ ಸಾಲ ಪಡೆದು ಅಲಂಕಾರ ಸಹಿತ ಬಂದ (4)
6. ತಾಳವನ್ನು ಗಮನಿಸುವುದರಲ್ಲೇ ಸಂಪೂರ್ಣ ಮಗ್ನ (3)
7. ವೀಳ್ಯದೆಲೆಗೆ ಹೊಂದಿಕೊಳ್ಳುವ ಮಾರುತ ಬಗೆ (4)
9. ಆರಿಸಿದ್ದನ್ನು ಬೆರಸಿದರೆ ಆರ್ಭಟಿಸು, ಕೂಗಾಡು (4)
11. ಕಾಣಿಕೆಗಳ, ಖರ್ಚುಗಳ ಲೆಕ್ಕ ಬರೆಯುವವ ಗೊತ್ತೇ? (4)
13. ನಿರ್ದೋಷಿಯನ್ನು ಬಿಡುಗಡೆಗೊಳಿಸಲು ಉಪವಾಸ (4)
15. ಕಂಡದ್ದೇ ಹಾಗೆ– ಮಸಿ ಹಚ್ಚುವ ವಸ್ತು (3)
17. ನೂರು ತಾವರೆ ಕೊಟ್ಟರೆ ಈ ಮೂಲಿಕೆ (4)
18. ಹಂತಕರನ್ನು ಬಂಧಿಸಿದರಷ್ಟೇ ನಿಯಂತ್ರಣ (4)
19. ಸೌಜನ್ಯಶೀಲರೆಂದರೆ ಒಳ್ಳೆಯ ಮನುಷ್ಯರೇ ತಾನೇ? (3)

ಮೇಲಿಂದ ಕೆಳಕ್ಕೆ:
1. ಸಂಚುಕೋರರಿಗೆ ತಕ್ಕ ಬುದ್ಧಿ– ವೈಶಾಲ್ಯ ರಹಿತ (4)
2. ರಸ್ತೆಯನ್ನ ನಯಗೊಳಿಸಿದ್ದಕ್ಕೆ ಬಾಳೆ–ಬೆಲ್ಲ ಮಿಶ್ರಣ (4)
3. ಆಂಜನೇಯನಂತೆ ಕುಳಿತ ನೋಡಿ ಮಹಾ ಪುಕ್ಕಲ (4)
5. ವರ್ತಕರಿಗಿರುವ ಅನುಕೂಲಗಳು ನಾನಾ ವಿಧ (4)
7. ಕೋಗಿಲೆಯ ಕಂಠದ ಹಾಡುಗಾರ (3)
8. ಧಾನ್ಯಕ್ಕೇನು ಕೊರತೆ? ಆತ ಸಿರಿವಂತ (3)
9. ಅನ್ನವನ್ನೀಯುವುದು ಇದೊಂದೇ ಭೂಮಿ (3)
10. ಮನ್ನಿಸಿದ್ದು ತಿಳಿದೊಡನೇ ಭಾರೀ ಸಂತಸ (3)
12. ನಿಶಾಚರ ಜನರ ಒಡೆಯ ಚಂದ್ರ (4)
14. 'ನೂರು ಹೆಜ್ಜೆ ಪಡೆದಿರುವ ಜೀವಿ'– ಹೇಗೆ? (4)
15. ಸುಂದರಾಕಾರ ದಿರಿಸನ್ನು ಅವರಿಗೆಂದೇ ಎತ್ತಿಡು (4)
16. ತೆಳ್ಳಗಿರುವವನ ಜೊತೆಗಷ್ಟೇ ಸ್ನೇಹ (4)

## 26–5–14ರ ಉತ್ತರಗಳು

ಎಡದಿಂದ ಬಲಕ್ಕೆ:
1. ಅನುಬಂಧ; 3. ಕಕವ; 4. ನಿರ್ಮೋಹ; 6. ನಿರಾತಂಕ; 7. ಸುಧಾಕರ; 8. ಮಾತುಕತೆ; 10. ತಡಸಲು; 12. ಮೂದಲಿಕೆ; 14. ಮೊದಲಿಗ; 16. ವರ್ಧನ; 17. ಮಿಗಿಸು; 18. ಚುನಾಯಿಸು.

ಮೇಲಿಂದ ಕೆಳಕ್ಕೆ:
1. ಅವನಿ; 2. ಧನಿಕ; 3. ಕಟ್ಟುಕತೆ; 5 ಹಳತು; 7. ಸುಭಾಷಿತ; 9. ತೆಗಳಿಕೆ; 11. ಸಚಿವ; 13. ಆದರಿಸು; 14. ಮೊನಚು; 15. ಗಮಿಸು.

## ಪ್ರಶ್ನಾಂಕಣ


# ವ್ಯೋಮನೌಕೆ – ಎಷ್ಟು ವೇಗ?

ಅದೆಷ್ಟೇ ಇರಲಿ, ಒಂದಂಶ ಸ್ಪಷ್ಟ: ಬೇರಾವ ವಾಹನದ ವೇಗವನ್ನೂ– ಸೂಪರ್ ಸಾನಿಕ್ ಯುದ್ಧ ವಿಮಾನಗಳ ವೇಗವನ್ನೂ ಕೂಡ– ವ್ಯೋಮನೌಕೆಗಳ ವೇಗಕ್ಕೆ ಹೋಲಿಸುವುದೂ ಸಾಧ್ಯವಿಲ್ಲ. ವ್ಯೋಮನೌಕೆಗಳದು ವಾಸ್ತವವಾಗಿ ಕಲ್ಪನಾತೀತ ವೇಗ. ಈವರೆಗಿನ ಹಾಗೂ ಅನತಿ ಭವಿಷ್ಯದ ಅತೀವ ವೇಗ ಕುರಿತ ಒಂದೆರಡು ನಿದರ್ಶನಗಳು:

ನಮ್ಮ ಸೌರವ್ಯೂಹದ ಸರ್ವ ಗ್ರಹಗಳಾಚಿನ ಪ್ರಸಿದ್ಧ ಕಾಯ 'ಪ್ಲೂಟೋ'ದತ್ತ ಪಯಣಿಸುತ್ತಿರುವ 'ನ್ಯೂ ಹೊರೈಜನ್ಸ್' ವ್ಯೋಮನೌಕೆಯದು ಮಹಾನ್ ವೇಗದ ಒಂದು ಅದ್ಭುತ ದಾಖಲೆ. 2006 ರಲ್ಲಿ ಉಡಾವಣೆಗೊಂಡು ಸಾಗುತ್ತಿರುವ ಈ ನೌಕೆಯ ವೇಗ ಗಂಟೆಗೆ ಒಂದು ಲಕ್ಷ ಅರವತ್ತು ಸಾವಿರ ಕಿ.ಮಿ.! ಎಂದರೆ ಪ್ರತಿ ಸೆಕೆಂಡ್‌ಗೆ ನಲವತ್ತೈದು ಕಿ.ಮಿ.! (ಈಗಿನ ಸರ್ವೋತ್ತಮ ಸೂಪರ್ ಸಾನಿಕ್ ವಿಮಾನಗಳ ವೇಗ ಸೆಕೆಂಡ್‌ಗೆ ಒಂದು ಕಿ.ಮೀ. ಮೀರುವುದಿಲ್ಲ.)

ಈ ವರೆಗಿನ ಗರಿಷ್ಠ ವೇಗದ ದಾಖಲೆಯ ವ್ಯೋಮನೌಕೆ 'ಹೀಲಿಯೋಸ್– 2'. ನಮ್ಮ ಸೂರ್ಯನ ಅಧ್ಯಯನಕ್ಕೆಂದು ಯಾನ ಕೈಗೊಂಡಿದ್ದ ಈ ನೌಕೆ (ಚಿತ್ರ–1) ಪಯಣಿಸಿದ ವೇಗ ಸಕೆಂಡ್‌ಗೆ ಸಮೀಪ ಎಪ್ಪತ್ತು ಕಿ.ಮಿ.! ಪ್ರಸ್ತುತ ಗುರುಗ್ರಹದತ್ತ ಸಾಗುತ್ತಿರುವ ವ್ಯೋಮನೌಕೆ 'ಜ್ಯೂನೋ' ಇಸವಿ 2016 ರಲ್ಲಿ ಗುರುಗ್ರಹದ ಗುರುತ್ವ ವಲಯವನ್ನು ಪ್ರವೇಶಿಸುವಾಗ ಅದರ ವೇಗ ಸೆಕೆಂಡ್‌ಗೆ ಎಪ್ಪತ್ತೊಂದು ಕಿ.ಮೀ. ಆಗಲಿದೆ!

ಇಸವಿ 2018 ರಲ್ಲಿ ನಮ್ಮ ಸೂರ್ಯನ ನಿಕಟ ಅಧ್ಯಯನಕ್ಕೆ ತೆರಳಲಿರುವ ಮತ್ತೊಂದು ವ್ಯೋಮನೌಕೆ 'ಸೋಲಾರ್ ಪ್ರೋಬ್ ಪ್ಲಸ್'ನ ವೇಗ ಈವರೆಗಿನ




ವೇಗದ ಸರ್ವದಾಖಲೆಗಳನ್ನೂ ಛಿದ್ರ ಮಾಡಲಿದೆ. ಆ ನೌಕೆಯ ಯೋಜಿತ ವೇಗ ತಾಸಿಗೆ ಏಳು ಲಕ್ಷ ಇಪ್ಪತ್ತು ಸಾವಿರ ಕಿ.ಮಿ.! ಎಂದರೆ ಪ್ರತಿ ಸೆಕೆಂಡ್‌ಗೆ ಸುಮಾರು ಇನ್ನೂರು ಕಿ.ಮಿ.! ಈ ವೇಗದಲ್ಲಿ ಚಂದ್ರನನ್ನು ತಲುಪಲು ಅರ್ಧ ಗಂಟೆ ಸಾಕು.

ವಿಸ್ಮಯ ಏನೆಂದರೆ ನಮ್ಮ ಸೌರವ್ಯೂಹದಾಚಿನ ಅನ್ಯಗ್ರಹಗಳನ್ನು, ಸೌರೇತರ ತಾರೆಗಳನ್ನು ತಲುಪಲು ಇಂಥ ವೇಗವೂ ಕಿಂಚಿತ್ತೂ ಸಾಲದು. ಏಕೆಂದರೆ ಬೆಳಕಿನ ವೇಗದಲ್ಲಿ– ಎಂದರೆ ಪ್ರತಿ ಸೆಕೆಂಡ್‌ಗೆ ಮೂರು ಲಕ್ಷ ಕಿ.ಮೀ. ವೇಗದಲ್ಲಿ ಚಲಿಸಿದರೂ ಸೌರೇತರ ಅತ್ಯಂತ ಸನಿಹದ ನಕ್ಷತ್ರವನ್ನು ಸಮೀಪಿಸಲು ನಾಲ್ಕು ವರ್ಷ ಬೇಕು; ಅತ್ಯಂತ ಸನಿಹದ ಅನ್ಯಗ್ರಹವನ್ನು ತಲುಪಲು ಹತ್ತು ವರ್ಷ ಬೇಕು. ಹಾಗಿರುವಾಗ ಸೆಕೆಂಡ್‌ಗೆ ನೂರು–ಇನ್ನೂರು ಕಿ.ಮೀ. ವೇಗದಲ್ಲಿ ಹತ್ತಾರು ಸಾವಿರ ವರ್ಷಗಳೂ ಸಾಲದೆಂಬುದು ಸ್ಪಷ್ಟ ತಾನೇ? ಆದ್ದರಿಂದಲೇ ಅನ್ಯಗ್ರಹಗಳ ಯಾನಗಳ ಆಲೋಚನೆ ಪ್ರಸ್ತುತ ಬರೀ ಕಲ್ಪನೆಗಳಲ್ಲಿ (ಚಿತ್ರ–2) ಸಾಧ್ಯ ಅಷ್ಟೇ!

■ ಎನ್. ವಾಸುದೇವ್